# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ: 20.12.2016ರಂದು ಬೆಳಗ್ಗೆ 11.00ಗಂಟೆಗೆ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ 10ನೇ ಮಹಡಿಯ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ನಿಗಮದ 214ನೇ ನಿರ್ದೇಶಕರ ಮಂಡಳ ಸಭೆಯ ನಡವಳಿಗಳು**

**ಹಾಜರಾತಿ**

| ಹೆಸರು ಮತ್ತು ಪದನಾಮ | |
|---|---|
| ಶ್ರೀ ಎಂ.ಎಸ್.ಬಸವರಾಜು,<br>ಮಾನ್ಯ ಅಧ್ಯಕ್ಷರು,ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, | ಅಧ್ಯಕ್ಷರು |
| ಶ್ರೀ ಪಿ.ಮಣಿವಣ್ಣನ್, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,ಕರ್ನಾಟಕ ಸರ್ಕಾರ | ನಿರ್ದೇಶಕರು |
| ಶ್ರೀ ಶ್ರೀನಿವಾಸಲು, ಭಾ.ಅ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು,<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ವ್ಯವಸ್ಥಾಪಕ ನಿರ್ದೇಶಕರು |
| ಶ್ರೀ. ಎನ್.ಲಕ್ಷ್ಮಣ್,<br>ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, | ನಿರ್ದೇಶಕರು |
| ಶ್ರೀಮತಿ ಎಲ್. ರಾಜೇಶ್ವರಿ,<br>ಉಪ ಕಾರ್ಯದರ್ಶಿಗಳು,ಸಾರ್ವಜನಿಕ ಉದ್ದಿಮೆಗಳ ಇಲಾಖೆ | ನಿರ್ದೇಶಕರು |
| ಶ್ರೀ ಸುರೇಶ್ ನಾಯ್ಕ,<br>ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | ನಿರ್ದೇಶಕರು |
| ಶ್ರೀ.ಹೆಚ್. ಪುಟ್ಟಸ್ವಾಮಿ, | ನಿರ್ದೇಶಕರು |
| ಶ್ರೀ.ವಿ.ಆರ್.ವಿಜಯಕುಮಾರ್ | ನಿರ್ದೇಶಕರು |
| ಶ್ರೀ. ಅರ್ಜುನ್ | ನಿರ್ದೇಶಕರು |
| ಶ್ರೀ.ಮಲ್ಲಪ್ಪ | ನಿರ್ದೇಶಕರು |
| ಡಾ.ಕೆ.ಸಿ.ಮಹತೊ,<br>ಮುಖ್ಯ ವ್ಯವಸ್ಥಾಪಕರು, ದಕ್ಷಿಣ ವಲಯ<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ಎನ್.ಎಸ್.ಸಿ.ಎಫ್.ಡಿ.ಸಿ ಪ್ರತಿನಿಧಿ |

**ಗೈರು ಹಾಜರಿ:**

| | |
|---|---|
| ಶ್ರೀಮತಿ: ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು,ಸಮಾಜ ಕಲ್ಯಾಣ ಇಲಾಖೆ, | ನಿರ್ದೇಶಕರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ನಿರ್ದೇಶಕರು |

ನಿಗಮದ ವ್ಯವಸ್ಥಾಪಕ ನಿರ್ದೇಶಕರವರು ನಿಗಮದ ಮಾನ್ಯ ಅಧ್ಯಕ್ಷರು, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ

ಸದಸ್ಯರುಗಳನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿ ಸಭೆ ನಡೆಸಬಹುದೆಂಬುದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. ಅಂತೆಯೇ ನಿಗಮದ 214ನೇ ನಿರ್ದೇಶಕರ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ನಿಗಮದ ಅಧ್ಯಕ್ಷರನ್ನು ವ್ಯವಸ್ಥಾಪಕ ನಿರ್ದೇಶಕರು ಕೋರಿದರು. ಅಂತೆಯೇ ಜರುಗಿದ 214ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿಗಳು.

**ವಿಷಯ ಸಂಖ್ಯೆ: 01 : 213ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳನ್ನು ಅಂಗೀಕರಿಸುವ ಬಗ್ಗೆ.**

ನಿಗಮದ 213ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳನ್ನು ಸಂಬಂಧಿಸಿದ ಎಲ್ಲಾ ಗೌರವಾನ್ವಿತ ನಿರ್ದೇಶಕರುಗಳಿಗೆ ಕಳುಹಿಸಿಕೊಡಲಾಗಿತ್ತು. ಸದರಿಯವರುಗಳಿಂದ ಈ ಸಂಬಂಧ ಯಾವುದೇ ಪ್ರತಿಕ್ರಿಯೆಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಗಳನ್ನು ಯಥಾವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: 01 : ಸದಸ್ಯರುಗಳಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 02 : ನಿಗಮದ 213ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ.**

ಕಳೆದ ಸಭೆಯಲ್ಲಿ ತೆಗೆದುಕೊಳ್ಳಲಾಗಿದ್ದ 12 ವಿಷಯಗಳಿಗೆ ಸಂಬಂಧಿಸಿದ ನಿರ್ಣಯಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಸಭೆಗೆ ವಿವರಿಸಲಾಯಿತು.

**ನಿರ್ಣಯ: 2 : ನಡವಳಿಗಳ ಮೇಲೆ ಕೈಗೊಂಡಿರುವ ಕ್ರಮಗಳನ್ನು ಪರಾಂಭರಿಸಿದ ಸಭೆಯು ಕ್ರಮಗಳನ್ನು ಯಥಾವತ್ತಾಗಿ ಒಪ್ಪಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 03 : ಆಡಳಿತ ವೆಚ್ಚಕ್ಕೆ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.**

ನಿಗಮವು ಪ.ಜಾತಿಯ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಸರ್ಕಾರದಿಂದ ಸ್ವೀಕರಿಸಿದ ಅನುದಾನವನ್ನು ಯಥಾವತ್ತಾಗಿ ಫಲಾನುಭವಿಗಳಿಗೆ ವಿತರಿಸುತ್ತಿದೆ. ನಿಗಮದ ಸಿಬ್ಬಂದಿ ಮತ್ತು ಆಡಳಿತ ವೆಚ್ಚಗಳಿಗಾಗಿ ನಿಗಮಕ್ಕೆ ಯಾವುದೇ ಸ್ವಂತ ಆದಾಯದ ಮೂಲಗಳಿರುವುದಿಲ್ಲ. ಫಲಾನುಭವಿಗಳಿಗೆ ವಿತರಿಸಿದ ಸಾಲದ ಮೇಲಿನ ಬಡ್ಡಿ ಮತ್ತು ಅವಧಿ ಠೇವಣಿಗಳ ಮೇಲಿನ ಬಡ್ಡಿ ಹೊರತುಪಡಿಸಿ ಇನ್ನಾವುದೇ ಆದಾಯದ ಮೂಲಗಳಿರುವುದಿಲ್ಲ. ಸರ್ಕಾರದಿಂದ ಸಿಬ್ಬಂದಿ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ನಿಗಮಕ್ಕೆ ಪ್ರಸ್ತುತ ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲ. ಕಳೆದ ಸಾಲಿನಲ್ಲಿ ರೂ.18.00/ ಕೋಟಿಗಳನ್ನು ಸಿಬ್ಬಂದಿ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ಖರ್ಚು ಮಾಡಲಾಗಿದೆ. ಅಲ್ಲದೆ ಮುಂಬರುವ ವರ್ಷಗಳಲ್ಲಿ ಹೊಸದಾಗಿ ಸಿಬ್ಬಂದಿ ನೇಮಕಾತಿ ಹಾಗೂ ವೇತನ ಹೆಚ್ಚಳ ಇತ್ಯಾದಿಗಳಿಂದಾಗಿ, ಸಿಬ್ಬಂದಿ ಮತ್ತು ಆಡಳಿತಾತ್ಮಕ ವೆಚ್ಚಗಳಲ್ಲಿ ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ.

ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಕನಿಷ್ಠ ರೂ.9.00ಕೋಟಿಗಳ ಆಡಳಿತಾತ್ಮಕ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಕಳುಹಿಸುವುದು ಸೂಕ್ತವಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ವಿವರಿಸಿದರು.

**ನಿರ್ಣಯ: 3 : ನಿಗಮಕ್ಕೆ ಆಡಳಿತಾತ್ಮಕ ವೆಚ್ಚಗಳಿಗಾಗಿ ಕನಿಷ್ಠ ರೂ.9.00ಕೋಟಿಗಳ ಆಡಳಿತಾತ್ಮಕ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ನಿರ್ಣಯಿಸಿತು.**

ಕ್ರಮ: ಪ್ರಧಾನ ವ್ಯವಸ್ಥಾಪಕರು(ಸಿ & ಆ)

**ವಿಷಯ ಸಂಖ್ಯೆ: 04 : ಸೆಪ್ಟೆಂಬರ್ ಮಾಹೆಯ ಒಳಗೆ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಪ್ರತಿ ಆರ್ಥಿಕ ವರ್ಷ ಆರಂಭಗೊಳ್ಳುವ ಏಪ್ರಿಲ್ ಮಾಹೆಯಲ್ಲಿ ಫಲಾಪೇಕ್ಷಿಗಳಿಗೆ ಸಾಲ ಸೌಲಭ್ಯ ಒದಗಿಸಲು ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸಲಾಗುತ್ತದೆ. ಸ್ವೀಕರಿಸಿದ ಅರ್ಜಿಗಳನ್ನು ಆಯಾ ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಗುರಿಗನುಗುಣವಾಗಿ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಿ ಜುಲೈ ಮಾಹೆಯ ಒಳಗೆ ಸಲ್ಲಿಸಲು 224 ವಿಧಾನಸಭಾ ಕ್ಷೇತ್ರಗಳ ಶಾಸಕರುಗಳಿಗೆ ಈಗಾಗಲೇ ಅನೇಕ ಬಾರಿ ಮನವರಿಕೆ ಮಾಡಿಕೊಡಲಾಗಿದೆ.

ಆದರೆ ಕೆಲವೇ ಕೆಲವು ಶಾಸಕರುಗಳು ಮಾತ್ರ ನಿಗದಿತ ಸಮಯದೊಳಗೆ ಆಯ್ಕೆ ಪಟ್ಟಿಯನ್ನು ನಿಗಮಕ್ಕೆ ಕಳುಹಿಸುತ್ತಿದ್ದು, ಉಳಿದ ಶಾಸಕರುಗಳು ಆರ್ಥಿಕ ವರ್ಷ ಮುಗಿಯುವ ಹಂತದಲ್ಲಿ ಕಳುಹಿಸಿಕೊಡುತ್ತಿದ್ದಾರೆ. ಆ ಅವಧಿಗಾಗಲೇ ಬ್ಯಾಂಕುಗಳಲ್ಲಿ ಆರ್ಥಿಕ ಚಟುವಟಿಕೆಗಳು ಕೊನೆಯ ಹಂತದಲ್ಲಿ ಇರುವುದರಿಂದ ಸಾಲ ಮಂಜೂರಾಗುವುದಿಲ್ಲ. ಇದರಿಂದ ಆಯಾ ಆರ್ಥಿಕ ವರ್ಷದಲ್ಲೇ ಫಲಾಪೇಕ್ಷಿಗಳಿಗೆ ಸವಲತ್ತು ಒದಗಿಸಲು ಸಾಧ್ಯವಾಗದೇ ತೊಂದರೆಯಾಗುತ್ತಿದೆ. ಕೆಲವು ಶಾಸಕರುಗಳು ಆರ್ಥಿಕ ವರ್ಷ ಅಂತ್ಯವಾದ ನಂತರ ಆಯ್ಕೆ ಪಟ್ಟಿಯನ್ನು ನಿಗಮಕ್ಕೆ ಸಲ್ಲಿಸುತ್ತಿದ್ದಾರೆ.

ಆದ್ದರಿಂದ ನಿಗಮದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಜನ ಸಾಮಾನ್ಯರಿಗೆ ಸೌಲಭ್ಯಗಳನ್ನು ಶೀಘ್ರವಾಗಿ ತಲುಪಿಸುವ ದೃಷ್ಟಿಯಿಂದ ಪ್ರತಿ ಆರ್ಥಿಕ ವರ್ಷದ ಸೆಪ್ಟೆಂಬರ್ ಮಾಹೆಯ ಒಳಗೆ ಆಯ್ಕೆ ಪಟ್ಟಿಗಳನ್ನು ನಿಗಮಕ್ಕೆ ಸಲ್ಲಿಸಲು ತಿಳಿಸಿ ಸರ್ಕಾರಿ ಆದೇಶವನ್ನು ಹೊರಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವೆಂದು ಮಂಡಳ ಸಭೆಯ ಗಮನಕ್ಕೆ ತರಲಾಯಿತು.

**ನಿರ್ಣಯ: 4 : ನಿಗಮದ ಯೋಜನೆಗಳನ್ನು ಅನುಷ್ಠಾನಗೊಳಿಸಿ ಜನ ಸಾಮಾನ್ಯರಿಗೆ ಶೀಘ್ರವಾಗಿ ತಲುಪಿಸುವ ಹಿತದೃಷ್ಟಿಯಿಂದ ಪ್ರತಿ ಆರ್ಥಿಕ ವರ್ಷದ ಸೆಪ್ಟೆಂಬರ್ ಮಾಹೆಯ ಒಳಗೆ ಆಯ್ಕೆ ಪಟ್ಟಿಗಳನ್ನು ಸಲ್ಲಿಸಲು ತಿಳಿಸಿ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ನಿರ್ಣಯಿಸಿತು.**

ಕ್ರಮ: ಪ್ರಧಾನ ವ್ಯವಸ್ಥಾಪಕರು(ಸಿ & ಆ)

**ವಿಷಯ ಸಂಖ್ಯೆ: 05:ಭೂ ಒಡೆತನ ಯೋಜನೆಯಡಿ ನಿಗಮದಿಂದ ಫಲಾನುಭವಿಗಳಿಗೆ ನೀಡಿರುವ ಜಮೀನನ್ನು ಮೆ|ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ.ಲಿ., ಇವರಿಗೆ ಸೇರಿದ ಜಮೀನಿಗೆ ಅದಲು-ಬದಲು ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.**

ನಿಗಮದಿಂದ ಭೂ ಒಡೆತನ ಯೋಜನೆಯಡಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ್ ತಾಲ್ಲೂಕಿನ, ಮದರಿ ಗ್ರಾಮದ ಭೂ ಮಾಲೀಕರಾದ ಶ್ರೀ ಗೋಪಾಳಪ್ಪ ಬಸಪ್ಪ ನಾಲತವಾಡ ಸಾ:ಮದರಿ, ಮುದ್ದೇಬಿಹಾಳ್ ಇವರಿಗೆ ಸೇರಿದ ಸರ್ವೆ ನಂ.40/2 ರಲ್ಲಿದ್ದ 8.00ಎಕರೆ ಖುಷ್ಕಿ ಜಮೀನನ್ನು ಭೂ ಒಡೆತನ ಯೋಜನೆಯಡಿ 1) ಶ್ರೀಮತಿ ರೇಣುಕಾ ಕೋಂ ಕನಕಪ್ಪ ಮಾದರ, 2) ಶ್ರೀಮತಿ ನೀಲವ್ವ ಕೋಂ ಮಹಾದೇವಪ್ಪ ಮಾದರ, 3)ಶ್ರೀಮತಿ ಶಾರವ್ವ ಕೋಂ ಯಮನಪ್ಪ ಮಾದರ, 4) ಶ್ರೀಮತಿ ಮಹಾದೇವಿ ಕೋಂ ಚಂದಪ್ಪ ಮಾದರ ಇವರುಗಳಿಗೆ ತಲಾ 2.00 ಎಕರೆಯಂತೆ ದಿನಾಂಕ:30.08.2011 ರಂದು ನಿಗಮದಿಂದ ಖರೀದಿ ಮಾಡಿ ಫಲಾನುಭವಿಗಳ ಹೆಸರುಗಳಿಗೆ ನೊಂದಾಯಿಸಲಾಗಿರುತ್ತದೆ. ಆದರೆ ಸದರಿ ಜಮೀನನ್ನು ಫಲಾಪೇಕ್ಷಿಗಳು ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್., ಪ್ರೈ.ಲಿ.,ಎರಗಲ್,ಮುದ್ದೇಬಿಹಾಳ್ ತಾಲ್ಲೂಕು ಇವರ ಹೆಸರಿಗೆ ವರ್ಗಾಯಿಸಿ, ಸದರಿ ಕಂಪನಿಯ ಒಡೆತನದಲ್ಲಿರುವ ಹಡಗಲಿ ಗ್ರಾಮದ ರಿಜಿಸ್ಟರ್ ಸರ್ವೆ ನಂ.75/3ರಲ್ಲಿ 4.23 ಎಕರೆ ಮತ್ತು 75/4ರಲ್ಲಿ 2.36ಎಕರೆ, ಒಟ್ಟು 7.19ಎಕರೆ ವಿಸ್ತೀರ್ಣದ ಜಮೀನನ್ನು ವರ್ಗಾಯಿಸಿಕೊಳ್ಳಲು ಒಪ್ಪಿರುವುದಾಗಿ ನಿಗಮದ ಜಿಲ್ಲಾ ಕಛೇರಿಗೆ ಮನವಿ ಪತ್ರ ಸಲ್ಲಿಸಿರುತ್ತಾರೆ. ಜಿಲ್ಲಾ ವ್ಯವಸ್ಥಾಪಕರ ವರದಿಯಂತೆ ನಿಗಮದಿಂದ ಖರೀದಿಸಿರುವ ಜಮೀನಿನ ದರ ಪ್ರತಿ ಎಕರೆಗೆ ರೂ.92,000/- ಇದ್ದು, ಬಾಲಾಜಿ ಶುಗರ್ಸ್& ಕೆಮಿಕಲ್ಸ್.,ಪ್ರೈಲಿ., ಇವರು ಬದಲಿಯಾಗಿ ನೀಡುತ್ತಿರುವ ಜಮೀನಿನ ಈಗಿನ ಮಾರ್ಗಸೂಚಿ ಬೆಲೆ ಪ್ರತಿ ಎಕರೆಗೆ ರೂ.1,40,000/- ಇರುತ್ತದೆ. ಈಗ ಫಲಾನುಭವಿಗಳಿಗೆ ನೀಡುತ್ತಿರುವ, ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್, ಪ್ರೈ, ಲಿ., ಎರಗಲ್

**ವಿಷಯ ಸಂಖ್ಯೆ: 04 : ಸೆಪ್ಟೆಂಬರ್ ಮಾಹೆಯ ಒಳಗೆ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಪ್ರತಿ ಆರ್ಥಿಕ ವರ್ಷ ಆರಂಭಗೊಳ್ಳುವ ಏಪ್ರಿಲ್ ಮಾಹೆಯಲ್ಲಿ ಫಲಾಪೇಕ್ಷಿಗಳಿಗೆ ಸಾಲ ಸೌಲಭ್ಯ ಒದಗಿಸಲು ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸಲಾಗುತ್ತದೆ. ಸ್ವೀಕರಿಸಿದ ಅರ್ಜಿಗಳನ್ನು ಆಯಾ ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಗುರಿಗನುಗುಣವಾಗಿ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಿ ಜುಲೈ ಮಾಹೆಯ ಒಳಗೆ ಸಲ್ಲಿಸಲು 224 ವಿಧಾನಸಭಾ ಕ್ಷೇತ್ರಗಳ ಶಾಸಕರುಗಳಿಗೆ ಈಗಾಗಲೇ ಅನೇಕ ಬಾರಿ ಮನವರಿಕೆ ಮಾಡಿಕೊಡಲಾಗಿದೆ.

ಆದರೆ ಕೆಲವೇ ಕೆಲವು ಶಾಸಕರುಗಳು ಮಾತ್ರ ನಿಗದಿತ ಸಮಯದೊಳಗೆ ಆಯ್ಕೆ ಪಟ್ಟಿಯನ್ನು ನಿಗಮಕ್ಕೆ ಕಳುಹಿಸುತ್ತಿದ್ದು, ಉಳಿದ ಶಾಸಕರುಗಳು ಆರ್ಥಿಕ ವರ್ಷ ಮುಗಿಯುವ ಹಂತದಲ್ಲಿ ಕಳುಹಿಸಿಕೊಡುತ್ತಿದ್ದಾರೆ. ಆ ಅವಧಿಗಾಗಲೇ ಬ್ಯಾಂಕುಗಳಲ್ಲಿ ಆರ್ಥಿಕ ಚಟುವಟಿಕೆಗಳು ಕೊನೆಯ ಹಂತದಲ್ಲಿ ಇರುವುದರಿಂದ ಸಾಲ ಮಂಜೂರಾಗುವುದಿಲ್ಲ. ಇದರಿಂದ ಆಯಾ ಆರ್ಥಿಕ ವರ್ಷದಲ್ಲೇ ಫಲಾಪೇಕ್ಷಿಗಳಿಗೆ ಸವಲತ್ತು ಒದಗಿಸಲು ಸಾಧ್ಯವಾಗದೇ ತೊಂದರೆಯಾಗುತ್ತಿದೆ. ಕೆಲವು ಶಾಸಕರುಗಳು ಆರ್ಥಿಕ ವರ್ಷ ಅಂತ್ಯವಾದ ನಂತರ ಆಯ್ಕೆ ಪಟ್ಟಿಯನ್ನು ನಿಗಮಕ್ಕೆ ಸಲ್ಲಿಸುತ್ತಿದ್ದಾರೆ.

ಆದ್ದರಿಂದ ನಿಗಮದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಜನ ಸಾಮಾನ್ಯರಿಗೆ ಸೌಲಭ್ಯಗಳನ್ನು ಶೀಘ್ರವಾಗಿ ತಲುಪಿಸುವ ದೃಷ್ಟಿಯಿಂದ ಪ್ರತಿ ಆರ್ಥಿಕ ವರ್ಷದ ಸೆಪ್ಟೆಂಬರ್ ಮಾಹೆಯ ಒಳಗೆ ಆಯ್ಕೆ ಪಟ್ಟಿಗಳನ್ನು ನಿಗಮಕ್ಕೆ ಸಲ್ಲಿಸಲು ತಿಳಿಸಿ ಸರ್ಕಾರಿ ಆದೇಶವನ್ನು ಹೊರಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವೆಂದು ಮಂಡಳಿ ಸಭೆಯ ಗಮನಕ್ಕೆ ತರಲಾಯಿತು.

**ನಿರ್ಣಯ: 4 : ನಿಗಮದ ಯೋಜನೆಗಳನ್ನು ಅನುಷ್ಠಾನಗೊಳಿಸಿ ಜನ ಸಾಮಾನ್ಯರಿಗೆ ಶೀಘ್ರವಾಗಿ ತಲುಪಿಸುವ ಹಿತದೃಷ್ಟಿಯಿಂದ ಪ್ರತಿ ಆರ್ಥಿಕ ವರ್ಷದ ಸೆಪ್ಟೆಂಬರ್ ಮಾಹೆಯ ಒಳಗೆ ಆಯ್ಕೆ ಪಟ್ಟಿಗಳನ್ನು ಸಲ್ಲಿಸಲು ತಿಳಿಸಿ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ನಿರ್ಣಯಿಸಿತು.**

ಕ್ರಮ: ಪ್ರಧಾನ ವ್ಯವಸ್ಥಾಪಕರು(ಸಿ & ಆ)

**ವಿಷಯ ಸಂಖ್ಯೆ: ೦೫:ಭೂ ಒಡೆತನ ಯೋಜನೆಯಡಿ ನಿಗಮದಿಂದ ಫಲಾನುಭವಿಗಳಿಗೆ ನೀಡಿರುವ ಜಮೀನನ್ನು ಮೆ।ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ.ಲಿ., ಇವರಿಗೆ ಸೇರಿದ ಜಮೀನಿಗೆ ಅದಲು-ಬದಲು ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.**

ನಿಗಮದಿಂದ ಭೂ ಒಡೆತನ ಯೋಜನೆಯಡಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ್ ತಾಲ್ಲೂಕಿನ, ಮದರಿ ಗ್ರಾಮದ ಭೂ ಮಾಲೀಕರಾದ ಶ್ರೀ ಗೋಪಾಳಪ್ಪ ಬಸಪ್ಪ ನಾಲತವಾಡ ಸಾ:ಮದರಿ, ಮುದ್ದೇಬಿಹಾಳ್ ಇವರಿಗೆ ಸೇರಿದ ಸರ್ವೆ ನಂ.40/2 ರಲ್ಲಿದ್ದ 8.00ಎಕರೆ ಖುಷ್ಕಿ ಜಮೀನನ್ನು ಭೂ ಒಡೆತನ ಯೋಜನೆಯಡಿ 1) ಶ್ರೀಮತಿ ರೇಣುಕಾ ಕೋಂ ಕನಕಪ್ಪ ಮಾದರ, 2) ಶ್ರೀಮತಿ ನೀಲವ್ವ ಕೋಂ ಮಹಾದೇವಪ್ಪ ಮಾದರ, 3)ಶ್ರೀಮತಿ ಶಾರವ್ವ ಕೋಂ ಯಮನಪ್ಪ ಮಾದರ, 4) ಶ್ರೀಮತಿ ಮಹಾದೇವಿ ಕೋಂ ಚಂದಪ್ಪ ಮಾದರ ಇವರುಗಳಿಗೆ ತಲಾ 2.00 ಎಕರೆಯಂತೆ ದಿನಾಂಕ:30.08.2011 ರಂದು ನಿಗಮದಿಂದ ಖರೀದಿ ಮಾಡಿ ಫಲಾನುಭವಿಗಳ ಹೆಸರುಗಳಿಗೆ ನೊಂದಾಯಿಸಲಾಗಿರುತ್ತದೆ. ಆದರೆ ಸದರಿ ಜಮೀನನ್ನು ಫಲಾಪೇಕ್ಷಿಗಳು ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್., ಪ್ರೈ.ಲಿ.,ಎರಗಲ್,ಮುದ್ದೇಬಿಹಾಳ್ ತಾಲ್ಲೂಕು ಇವರ ಹೆಸರಿಗೆ ವರ್ಗಾಯಿಸಿ, ಸದರಿ ಕಂಪನಿಯ ಒಡೆತನದಲ್ಲಿರುವ ಹಡಗಲಿ ಗ್ರಾಮದ ರಿಜಿಸ್ಟರ್ ಸರ್ವೆ ನಂ.75/3ರಲ್ಲಿ 4.23 ಎಕರೆ ಮತ್ತು 75/4ರಲ್ಲಿ 2.36ಎಕರೆ, ಒಟ್ಟು 7.19ಎಕರೆ ವಿಸ್ತೀರ್ಣದ ಜಮೀನನ್ನು ವರ್ಗಾಯಿಸಿಕೊಳ್ಳಲು ಒಪ್ಪಿರುವುದಾಗಿ ನಿಗಮದ ಜಿಲ್ಲಾ ಕಛೇರಿಗೆ ಮನವಿ ಪತ್ರ ಸಲ್ಲಿಸಿರುತ್ತಾರೆ. ಜಿಲ್ಲಾ ವ್ಯವಸ್ಥಾಪಕರ ವರದಿಯಂತೆ ನಿಗಮದಿಂದ ಖರೀದಿಸಿರುವ ಜಮೀನಿನ ದರ ಪ್ರತಿ ಎಕರೆಗೆ ರೂ.92,000/- ಇದ್ದು, ಬಾಲಾಜಿ ಶುಗರ್ಸ್& ಕೆಮಿಕಲ್ಸ್.,ಪ್ರೈಲಿ., ಇವರು ಬದಲಿಯಾಗಿ ನೀಡುತ್ತಿರುವ ಜಮೀನಿನ ಈಗಿನ ಮಾರ್ಗಸೂಚಿ ಬೆಲೆ ಪ್ರತಿ ಎಕರೆಗೆ ರೂ.1,40,000/- ಇರುತ್ತದೆ. ಈಗ ಫಲಾನುಭವಿಗಳಿಗೆ ನೀಡುತ್ತಿರುವ, ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್, ಪ್ರೈ, ಲಿ., ಎರಗಲ್